

ಅರ್ಥ. ತಲೆ ಉಜ್ಜುವಾಗ ನೆಲದ ಮೇಲೆ ಬಗ್ಗಿ ಕುಳಿತ ನನ್ನನ್ನು ಮತ್ತೂ ಬಗ್ಗಿಸಿ ನೆನೆಸಿಟ್ಟ ಅಂಟುವಾಳಕಾಯಿಯ ನೀರನ್ನು ಹಾಕಿ ಗಸಗಸನೆ ತಿಕ್ಕುವ ರಭಸಕ್ಕೆ ತಲೆ ಭಗಭಗನೆ ಉರಿಯುತ್ತಿತ್ತು. ಮಿಸುಕಾಡಿದರೆ ನೀರು ಹೊಯ್ಯುವ ತಾಮ್ರದ ಚೊಂಬಿನಿಂದಲೇ ತಲೆಗೆ ಠಣ್ಣನೆ ಮೊಟಕಿ ಅವರಿವರ ಮೇಲಿನ ಸಿಟ್ಟನ್ನು ತೀರಿಸಿಕೊಳ್ಳುತ್ತಿದ್ದಳು. ಹೀಗೆ ಎಲ್ಲರಿಂದಲೂ ತಲೆಗೆ ಮೊಟಕಿಸಿಕೊಂಡಿದ್ದೇ ಮೊದ್ದುಮಣಿಯೆನ್ನಿಸಿಕೊಳ್ಳಲು ಮೂಲಕಾರಣವೆಂಬುದು ನನ್ನ ಬಲವಾದ ನಂಬಿಕೆ. ಅದೇನೇ ಇರಲಿ, ಯಾವುದೇ ಸುವಿಧಗಳಿಲ್ಲದ ಆ ಸಣ್ಣ ಮನೆಯಲ್ಲಿ ಕಳೆದ ಮುದದ ಬಾಲ್ಯಕ್ಕೆ ಇಂದಿನ ಸುಖದ ಸುಪ್ಪತ್ತಿಗೆಯ ಬಾಲ್ಯ ಖಂಡಿತವಾಗಿಯೂ ಸಾಟಿಯಾಗದು... ನೆನಪಿನ ದೋಣಿಯಲ್ಲಿ ತೇಲುತ್ತಿದ್ದಾಗ 'ಕೋಲ್ಮಿಂಚು ಇಣಕಿಣಕಿ ಕಣ್ಣುಕಣಿಸಿ ಕೆಣಕೆಣಕಿ ಒಳಸೇರಿ ಹರೆ ಮೀರಿದ್ದಾಂಗ ಕೂತೇವೋ' ಸೊಲ್ಲಿನ ಸಾಲು ಮೊದ್ದುಮಣಿಯಾದದ್ದರ ನೆನಪಿಂದ ಮಳೆಯ ನೆನಪತ್ತ ಎಳೆದೊಯ್ದಿತು!

ಬಿರುಬೇಗೆಯಿಂದ ಬೆಂದ ಭೂತಾಯಿಯ ಮೈ ಮೊದಲ ಮಳೆಗೆ ನೆನೆದು ಅರಳಿದಾಗ ಸೂಸುತ್ತಿದ್ದ ಮಣ್ಣಿನ ವಿಶಿಷ್ಟ ಪರಿಮಳಕ್ಕೆ ಮನಸೋತು ಮೂಗರಳಿಸಿ ಘಮ ಹೀರಿದ್ದು ಸಾಲದೇ ಕಿಟಕಿಯ ಸರಳಿಗೆ ಮುಖ ಒತ್ತಿ ನಿಂತದ್ದು; ಮಳೆಯ ಸಂಜೆಯಲ್ಲಿ ಆಯಿ ಕರಿಯುತ್ತಿದ್ದ ದೊಡ್ಡಪತ್ರೆ ಎಲೆಯ ಭಜಿಯ ರುಚಿಯ ಸ್ವಾದ; ನೋಟುಬುಕ್ಕಿನ ಹಾಳೆ ಹರಿದು ದೋಣಿ ಮಾಡಿ ಗಟಾರದಲ್ಲಿ ತೇಲಿ ಬಿಡುತ್ತಿದ್ದದ್ದು; ಮಳೆಯ ಜಿನುಗಲ್ಲಿ ನೆನೆಯಲು ನೆಪ ಹುಡುಕುತ್ತಿದ್ದದ್ದು; ಜಿಟಿಜಿಟಿ ಮಳೆಯ ಸಂಜೆ ಮನೆಯ ಹಜಾರದಲ್ಲಿ ಅಳಗುಳಿ ಮಣೆ ಆಡುತ್ತಾ ಹುರಿಗಾಳನ್ನು ಕಟುಂ ಎನ್ನಿಸುತ್ತಾ ಬಿಸಿಕಾಫಿ ಹೀರುತ್ತಾ ಸವಿದದ್ದು, ಜೊತೆಗೆ ಬೆಕ್ಕಿನ ಮರಿಯ ಚೆನ್ನಾಟ; ಹೀಗೆ ಅಸಂಖ್ಯ ಸವಿನೆನಪುಗಳ ಸಂತೆಗೆ ಮನ ಅರಳಿತ್ತು.

ಮೋಡ ಕವಿದು ಮಳೆ ಬರುವಂತಾದಾಗ ಅಂಗಳದಲ್ಲಿ ಗೆಳತಿಯರೆಲ್ಲ ಸೇರಿ 'ಮಳೆರಾಯ ಮಳೆರಾಯ ಹೊನ್ನ ಸುರಿಸೋ... ಭೂಮಿತಾಯಿ ಭೂಮಿತಾಯಿ ಬಂಗಾರ ಬೆಳೆಸೋ...' ರಾಗವಾಗಿ ಹಾಡುತ್ತಾ ಗಿರಿಗಿರಿ ತಿರುಗಿ ಥಟ್ಟನೆ ಕೂರುತ್ತಿದ್ದ ರಭಸಕ್ಕೆ ಸುತ್ತಲೂ ಫ್ರಾಕಿನ ನೆರಿಗೆಗಳು ಬಿಚ್ಚಿದ ಕೊಡೆಯಂತೆ ಉಬ್ಬಿ ನಿಲ್ಲುತ್ತಿದ್ದವು. ಯಾರ ಫ್ರಾಕು ಹೆಚ್ಚು ಉಬ್ಬಿ ಗುಂಡಗೆ ನಿಂತಿತೆಂಬುದನ್ನು ನೋಡಿ ಮತ್ತೆ ಇನ್ನೂ ಜೋರಾಗಿ ತಿರುಗುತ್ತಾ ಕೂರುವುದು, ಕೆಲವೊಮ್ಮೆ ಖಬರ್ರುಗೆಟ್ಟು ತಿರುಗಿದ ರಭಸಕ್ಕೆ ಆಯ ತಪ್ಪಿ ಬಿದ್ದು ನೋವಾದರೂ ಅಂಡುಜ್ಜುತ್ತಾ ಎದ್ದು ಹೋ ಎಂದು ಕಿರುಚಿ ಏನೂ ಆಗದಂತೇ ಪೋಜ್ ಕೊಟ್ಟು ನಗುವುದರಲ್ಲಿದ್ದ ಮಜವೋ... ಆಹ್...! ಅಕಸ್ಮಾತ್ ಮಳೆ ಬಂದರಂತೂ ನಾವು ಹಾಡಿದ್ದಕ್ಕೇ ಮಳೆ ಬಂತೆಂಬ ಹೆಚ್ಚುಗಾರಿಕೆಯ ಮುಗ್ಧ ಸಂಭ್ರಮ.

ಭೂಮಿಯೊಳಗೆ ಅಡಗಿದ್ದ ಕಪ್ಪೆ ಸಂತತಿಗೂ ಮಳೆಯೆಂದರೆ ಸಂತಸವಿದ್ದೀತು... 'ವಟರ್... ವಟರ್...' ಎದ್ದೋಡಿ ರಾಗದ ಸಮೂಹಗಾನ ಶುರು! ಅದೂ ಎಷ್ಟು ಜೋರೆಂದರೆ ನಾವು ಮಾತಾಡಿದ್ದು ಕೇಳಿಸದಷ್ಟು. ಕಪ್ಪೆಗೂ ಇಂಗ್ಲೀಷು ಬರುತ್ತದೆಂದು ಆಡಿಕೊಳ್ಳುತ್ತಾ ಅದರಂತೇ ಅನುಕರಿಸಿ ಅರಚುತ್ತಾ ಕುಣಿದು ಕುಪ್ಪಳಿಸುವುದೂ ಮೋಜಿನ ಆಟಗಳಲ್ಲೊಂದಾಗಿತ್ತು.

ಆಗ ಈಗಿನಂತೆ ಎರಡು ಮಡಿಕೆ, ಮೂರು ಮಡಿಕೆಯ ಛತ್ರಿ ಇರದ ದಿನಗಳವು. ಕೊಕ್ಕೆ ಹಿಡಿಕೆಯ